ಮಾರ್ಗವಲ್ಲ. ಭಾರತದ ಬಹುತೇಕ ಎಲ್ಲಾ ದೇಶ ಭಾಷೆಗಳಲ್ಲಿಯೂ ಈ ತೆರನ ಪ್ರಕ್ರಿಯೆಗಳು ನಡೆದಿವೆ. ಮಹಾಭಾರತವನ್ನು ಒಂಬತ್ತನೇ ಶತಮಾನದಲ್ಲಿ ತಮಿಳಿನಲ್ಲಿ ಬರೆದ ಪೆರುಂದೇವನಾರ್, ಹನ್ನೊಂದನೇ ಶತಮಾನದಲ್ಲಿ ತೆಲುಗಿನಲ್ಲಿ ಮಹಾಭಾರತ ರಚಿಸಿದ ನನ್ನಯ ಕವಿ, ಮಲಯಾಳಂನಲ್ಲಿ ಮಹಾಭಾರತ ರೂಪಿಸಿದ ಹದಿನಾರನೇ ಶತಮಾನದ ಕವಿ ತುಂಜತ್ ರಾಮಾನುಜಂ ಎಳುತ್ತಚ್ಚನ್ ಹೀಗೆ ಎಲ್ಲರೂ ಒಂದಲ್ಲ ಒಂದು ರೀತಿಯಲ್ಲಿ ಸೃಜನಶೀಲ ಪ್ರಕ್ರಿಯೆಯ ಭಾಗವಾಗಿಯೇ ಮಹಾಭಾರತವನ್ನು ರಚಿಸಿದ್ದಾರೆ. ಅಂದರೆ ಅನ್ಯಭಾಷೆಯ ಮೂಲ ಪಠ್ಯವನ್ನಾಧರಿಸಿದ ರಚನೆ ಎಂದರೆ ಭಾಷಾಂತರ ಪ್ರಕ್ರಿಯೆಗಿಂತಲೂ ಮಿಗಿಲಾಗಿ ಸೃಜನಶೀಲ ಪ್ರಕ್ರಿಯೆಯ ಭಾಗವೇ ಆಗಿತ್ತು ಎಂಬುದು ಸ್ಪಷ್ಟ.

ಅನ್ಯಭಾಷೆಯ ಮೂಲ ಪಠ್ಯವನ್ನಾಧರಿಸಿದ ರಚನೆಯೊಂದು ಭಾಷಾಂತರ ಕೃತಿಯಾಗಿ ಪರಿಗಣಿಸಲಾರಂಭಿಸಿದ್ದು ವಸಾಹತುಶಾಹಿ ಕಾಲಘಟ್ಟದಲ್ಲಿ. ಪಾಶ್ಚಾತ್ಯರಲ್ಲಿ ಅದರಲ್ಲಿಯೂ ಮುಖ್ಯವಾಗಿ ಬೈಬಲ್ ಭಾಷಾಂತರಗಳ ಸಂದರ್ಭದಲ್ಲಿ ಭಾಷಾಂತರಕ್ಕೊಂದು ತಾತ್ವಿಕತೆ ದೃಢವಾಯಿತು. ಬೈಬಲ್‌ನಲ್ಲಿ ಇರುವುದು ದೇವವಾಣಿ. ಅದನ್ನು ಇನ್ನೊಂದು ಭಾಷೆಗೆ ಕೊಂಡೊಯ್ದರೆ ದೇವವಾಣಿ ಕಲುಷಿತವಾಗಬಹುದು ಎಂಬ ಆತಂಕ ಬೈಬಲ್‌ನಲ್ಲಿ ನಿಷ್ಠೆಯಿರಿಸಿದ ಜನರಿಗಿತ್ತು. ಅರ್ಮಯಿಕ್ ಭಾಷೆಯಲ್ಲಿಯೋ, ಹೀಬ್ರೂ ಭಾಷೆಯಲ್ಲಿಯೋ ಮಾತ್ರ ಬೈಬಲ್ ಇರಬೇಕು. ಅವುಗಳಲ್ಲಿ ಇನ್ನೊಂದು ಭಾಷೆಗೆ ಭಾಷಾಂತರಿಸಬಾರದು ಎಂಬ ನಿಲುವನ್ನು ಚರ್ಚ್‌ಗಳು ಹೊಂದಿದ್ದವು. ಆದರೆ ಅರ್ಮಯಿಕ್ ಭಾಷೆಯನ್ನು, ಹೀಬ್ರೂ ಭಾಷೆಯನ್ನು ಬಲ್ಲವರ ಸಂಖ್ಯೆ ಕಡಿಮೆಯಿದೆ. ಹಾಗಾದರೆ ಧರ್ಮ ಸೀಮಿತ ಜನರಿಗೆ ಮಾತ್ರವಾಗಿ ಉಳಿಯುತ್ತದೆ ಎಂಬ ಕಾರಣಕ್ಕೆ ಮೊದಲು ಬೈಬಲ್ ಭಾಷಾಂತರವನ್ನು ವಿರೋಧಿಸಿದ ಚರ್ಚ್‌ಗಳೇ ಭಾಷಾಂತರಕ್ಕೆ ಬೆಂಬಲ ವ್ಯಕ್ತಪಡಿಸಿದವು. ನಿರ್ದಿಷ್ಟ ಸಮಿತಿಗಳ ನೇತೃತ್ವದಲ್ಲಿ ಪರಿಷ್ಕರಣೆ, ಪರಿಷ್ಕಾರಗಳ ಮೂಲಕ ಮೊದಲ ಬಾರಿಗೆ ಗ್ರೀಕ್ ಭಾಷೆಯಲ್ಲಿ ಬೈಬಲ್ ಭಾಷಾಂತರವಾಯಿತು. ಮುಂದೆ ಅಲ್ಲಿಂದ ಯುರೋಪಿಯನ್ ಭಾಷೆಗಳಿಗೂ ಅನುವಾದವಾದವು. ಇಂದು ಜಗತ್ತಿನಲ್ಲಿ ಹೆಚ್ಚು ಭಾಷೆಗಳಿಗೆ ಮತ್ತು ಹೆಚ್ಚು ಭಾಷಾಂತರವಾದ ಕೃತಿ ಬೈಬಲ್ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಮೂಲನಿಷ್ಠೆ ಎಂಬುದೇ ಬೈಬಲ್ ಭಾಷಾಂತರದ ಸಂದರ್ಭದ ಮುಖ್ಯ ತಾತ್ವಿಕತೆಯಾಗಿತ್ತು. ಮೂಲದ ಅರ್ಥವನ್ನು ಕೆಡಿಸದೆ, ಏನನ್ನೂ ಬಿಡದೆ, ಏನನ್ನೂ ಸೇರಿಸದೆ ಮೂಲನಿಷ್ಠವಾಗಿ ಭಾಷಾಂತರಿಸುವುದು ಇಲ್ಲಿ ಮುಖ್ಯ ಲಕ್ಷ್ಯವಾಗಿತ್ತು. ಇದು ಮುಂದೆ ಭಾಷಾಂತರದಲ್ಲಿ ಮೂಲನಿಷ್ಠೆಯೇ ಭಾಷಾಂತರದ ಮೂಲತತ್ವ ಎಂದು ಎಲ್ಲಾ ಸಂದರ್ಭಗಳಲ್ಲಿ ಅನ್ವಯವಾಗತೊಡಗಿತು. ವಸಾಹತುಶಾಹಿ ಕಾಲಘಟ್ಟದಲ್ಲಿ ಇಂಗ್ಲಿಷಿನಿಂದ ಭಾರತೀಯ ಭಾಷೆಗಳಿಗೆ ಬಂದ ಭಾಷಾಂತರಗಳು, ಭಾರತೀಯ ಭಾಷೆಗಳಿಂದ ಇಂಗ್ಲಿಷ್‌ಗೆ ಮಾಡಿದ ಭಾಷಾಂತರಗಳ ಸಂದರ್ಭದಲ್ಲಿ ಮೂಲ ಪಠ್ಯ ಮತ್ತು ಭಾಷಾಂತರ ಪಠ್ಯ ಎಂಬ ಎರಡು ಪರಿಕಲ್ಪನೆಗಳು ಸ್ಪಷ್ಟವಾದುವು. ಅದುವರೆಗೂ ಮೂಲಪಠ್ಯ ಮತ್ತು ಲಕ್ಷ್ಯಪಠ್ಯ ಎಂಬ ಪ್ರತ್ಯೇಕತೆ ಇಲ್ಲದೆಯೇ ಸೃಜನಶೀಲ ಪಠ್ಯ ಎಂಬ ನೆಲೆಯಲ್ಲಿ ಪರಿಗಣಿತವಾಗಿದ್ದ ಪ್ರಕ್ರಿಯೆಯ ನೆಲೆಗಟ್ಟು ಬೇರೆಯಾಯಿತು. ಮೂಲಪಠ್ಯಕ್ಕೆ ಅಧೀನವಾಗಿ ರೂಪುಗೊಳ್ಳುವ ಅಥವಾ ವಿಧೇಯತೆಯಿಂದ ರೂಪುಗೊಳ್ಳುವ ಭಾಷಾಂತರಪಠ್ಯ ಎಂಬ ಪ್ರಭೇದಗಳನ್ನು ಗುರುತಿಸಲಾಯಿತು. ಈ ಎರಡೂ ಪಠ್ಯಗಳ ನಡುವೆ ಸೃಜನಶೀಲವಾದ ಮೂಲ ಪಠ್ಯಕ್ಕೆ ಮೊದಲನೆಯ ಸ್ಥಾನ. ಅದನ್ನು ಅನುಸರಿಸಿದ ಭಾಷಾಂತರ ಪಠ್ಯಕ್ಕೆ ಎರಡನೆಯ ಸ್ಥಾನ ತಾನೇ ತಾನಾಗಿ ಸಿದ್ಧವಾಯಿತು. ಮೂಲ ನಿಷ್ಠೆಗಿಂತಲೂ ಲಕ್ಷ್ಯಭಾಷೆಯಲ್ಲಿ ಬೇಕಾದಂತೆ ಭಾಷಾಂತರಗಳನ್ನು ರೂಪಿಸಿಕೊಳ್ಳಬೇಕು ಎಂಬ ನಿಲುವು ವಸಾಹತು ಸಂದರ್ಭದಲ್ಲಿ ವ್ಯಕ್ತವಾಗಿತ್ತು. ಇವರ ದೃಷ್ಟಿಯಲ್ಲಿ ಪ್ರತಿಯೊಂದು ಭಾಷಾಂತರವು ಒಂದು ಹೊಸ ವ್ಯಾಖ್ಯಾನ ಅಥವಾ ಮರುಸೃಷ್ಟಿ. ಈ ಅರ್ಥದಲ್ಲಿ ಪ್ರತಿಯೊಂದು ಭಾಷಾಂತರವೂ ಒಂದು ಹೊಸಸೃಷ್ಟಿಯೇ ಆಗುತ್ತದೆ. ಒಮ್ಮೆ ಹೇಳಿದ ಮಾತನ್ನು ಮತ್ತೆಂದೂ ಯಥಾವತ್ತಾಗಿ ಪುನರಾವರ್ತಿಸುವುದು ಅಸಾಧ್ಯ. ಮೂಲ ಎನ್ನುವುದು ಕಲ್ಪಿತವೇ ಹೊರತು ವಾಸ್ತವವಲ್ಲ. ಭಾಷಾಂತರಕಾರರು ನಿಷ್ಠವಾಗಿರಬೇಕಾದುದು ಮೂಲ ಆಶಯಕ್ಕೆ ಹೊರತು ಪಠ್ಯಕ್ಕಲ್ಲ. ಹಾಗಾಗಿ ನಿಜವಾದ ಪಠ್ಯವಿರುವುದು